Sub copy

ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ದಿನಾಂಕ : 12 MAY 2020

ಸಂಖ್ಯೆ: ಕವಿಪ್ರನಿನಿ/ಬಿ81/89615/2018-19

## ಅಧಿಕೃತ ಜ್ಞಾಪನಾ

ವಿಷಯ: ನಿಗಮದ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ:
1. ಶ್ರೀ.ರಾಜಶೇಖರ್.ಬಿ.ಗರಸಂಗಿ, ಜಿಲ್ಲಾ ಮತ್ತು ಸತ್ರಾ ನ್ಯಾಯಾಧೀಶರು (ನಿವೃತ್ತ), ಎಸ್.ಎಂ.ರಸ್ತೆ, ಟಿ.ದಾಸರಹಳ್ಳಿ, ಬೆಂಗಳೂರು ರವರ ದಿನಾಂಕ: 03.03.2020 ರ ಮನವಿ ಪತ್ರ
2. ಕವಿಪ್ರನಿನಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ81/89615/2018-19 ದಿನಾಂಕ: 08.01.2020.
3. ಕವಿಪ್ರನಿನಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ81/89615/2018-19 ದಿನಾಂಕ: 08.05.2019 ಮತ್ತು 20.06.2019

-----

ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಗಮದ ಅಧಿಕಾರಿ/ನೌಕರರ ವಿರುದ್ಧ ಅಗತ್ಯವಿದ್ದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ (ವರ್ಗೀಕರಣ, ಶಿಸ್ತು ನಿಯಂತ್ರಣ ಮತ್ತು ಮೇಲ್ಮನವಿ) ನಿಬಂಧನೆಗಳು, 1987 ರ ನಿಬಂಧನೆ-11 ರ ಅಡಿಯಲ್ಲಿ ಇಲಾಖಾ ವಿಚಾರಣೆಗಳನ್ನು ನಡೆಸಲು ಕಾಲ ಕಾಲಕ್ಕೆ ನಿವೃತ್ತ ನ್ಯಾಯಾಧೀಶರು/ಅಧಿಕಾರಿಗಳನ್ನು ಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗಿರುತ್ತದೆ.

ಈ ಕೆಳಕಂಡ ನಿವೃತ್ತ ನ್ಯಾಯಾಧೀಶರು ತನ್ನನ್ನು ನಿಗಮದಲ್ಲಿ ವಿಚಾರಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲು ಅವಕಾಶ ನೀಡುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಮನವಿಯನ್ನು ಪರಿಗಣಿಸಿ ನಿಗಮದಲ್ಲಿ ವಿಚಾರಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಲು ಅನುಮೋದನೆಯನ್ನು ಈ ಮೂಲಕ ನೀಡಲಾಗಿದೆ. ಸದರಿ ನಿವೃತ್ತ ನ್ಯಾಯಾಧೀಶರ ಪ್ರಸ್ತುತ ವಿಳಾಸ ಹಾಗೂ ದೂರವಾಣಿ ಸಂಖ್ಯೆಯನ್ನು ಈ ಕೆಳಕಂಡಂತಿರುತ್ತದೆ. ಕವಿಪ್ರನಿನಿಯ ವಲಯ/ವೃತ್ತ/ವಿಭಾಗಗಳಲ್ಲಿ ದಿನಾಂಕ: 08.05.2019 ರ ಅಧಿಕೃತ ಜ್ಞಾಪನಾ ಆದೇಶದಲ್ಲಿ ತಿಳಿಸಿರುವ ವಿಚಾರಣಾಧಿಕಾರಿಗಳೊಂದಿಗೆ ಈ ಕೆಳಕಂಡ ವಿಚಾರಣಾಧಿಕಾರಿಯವರ ಸೇವೆಯನ್ನು ದಿನಾಂಕ:31.12.2020 ರವರೆಗೆ ಹಾಲಿ ಚಾಲ್ತಿಯಲ್ಲಿರುವ ನಿಯಮಗಳನುಸಾರ ಪಡೆಯಬಹುದಾಗಿರುತ್ತದೆ.

| ಕ್ರ.ಸಂ | ಹೆಸರು | ವಿಳಾಸ ಮತ್ತು ಮೊಬೈಲ್ ಸಂಖ್ಯೆ |
|---|---|---|
| 1. | ಶ್ರೀ.ರಾಜಶೇಖರ್.ಬಿ.ಗರಸಂಗಿ, ಜಿಲ್ಲಾ ಮತ್ತು ಸತ್ರಾ ನ್ಯಾಯಾಧೀಶರು(ನಿವೃತ್ತ). | ನಂ-205, 2 ನೇ ಫ್ಲೋರ್, ಮೇಗಾಸ್ ಸನ್ನಿದಾನಮ್, 4ನೇ ಅಡ್ಡರಸ್ತೆ, ಗ್ರೇಪ್ಸ್ ಗಾರ್ಡನ್, ಎಸ್.ಎಂ.ರಸ್ತೆ, ಟಿ.ದಾಸರಹಳ್ಳಿ, ಬೆಂಗಳೂರು<br>ಮೊಬೈಲ್ ಸಂಖ್ಯೆ: 90356-52154/95354-44495<br>ಇಮೈಲ್ ಐಡಿ: pbrg25@gmail.com |

ಇಲಾಖಾ ವಿಚಾರಣೆಗಳನ್ನು ನಡೆಸುವ ವಿಚಾರಣಾಧಿಕಾರಿಗಳಿಗೆ ನಿಗಮದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ81/89615/2018-19 ದಿನಾಂಕ:08.01.2020 ರ ಆದೇಶದ ಪ್ರಕಾರ ಪರಿಶ್ರಮ ಧನವನ್ನು ನೀಡಬಹುದಾಗಿರುತ್ತದೆ. ಮುಂದುವರೆದಂತೆ ವಿಚಾರಣಾಧಿಕಾರಿಗಳು ತಮ್ಮ ನಿವಾಸ ಸ್ಥಳವನ್ನು ಹೊರತುಪಡಿಸಿ ಬೇರೆ ಸ್ಥಳದಲ್ಲಿ ಇಲಾಖಾ ವಿಚಾರಣೆಗಳನ್ನು ನಡೆಸುವ ಸಂದರ್ಭಗಳಲ್ಲಿ, ನಿಗಮದ ಪ್ರವರ್ಗ-1 ರ ಅಧಿಕಾರಿಗಳಿಗೆ ನೀಡುವಂತೆಯೇ ದಿನ ಭತ್ಯೆಯನ್ನು ನೀಡತಕ್ಕದ್ದು.

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ
ರವರಿಂದ ಅನುಮೋದಿಸಲ್ಪಟ್ಟಿದೆ."

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ)
ಕವಿಪ್ರನಿನಿ

**<u>ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:</u>**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ/ಸೆಸ್ಕ್.
2. ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.
3. ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.
4. ಉಪ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ)/(ತಾಂತ್ರಿಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
5. ವಿಚಾರಣಾಧಿಕಾರಿಗಳು, ಪಟ್ಟಿಯಲ್ಲಿರುವ ವಿಳಾಸಕ್ಕೆ
6. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/ನಿರ್ದೇಶಕರು(ಪ್ರಸರಣ)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

<u>www.kptcl.com/eprasarana</u> for information of:

7. ಅಧೀಕ್ಷಕ ಇಂಜಿನಿಯರ್(ವಿ)ಗಳು, ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.
8. ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಗಳು, ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.
9. ವ್ಯವಸ್ಥಾಪಕರು(ವಿಚಾರಣೆಗಳು-1/ಸಿಬ್ಬಂದಿ-1/ಸಿಬ್ಬಂದಿ-2/ಕಾನೂನು/ಆಂತರಿಕ ನಿರ್ವಹಣೆ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ಲೆಕ್ಕಾಧಿಕಾರಿ (ಆಂತರಿಕ ತನಿಖೆ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು

Sub: Appointment of Enquiry officers to Conduct Departmental Enquiry against officers/Employees of the Corporation.

ವಿಷಯ: ನಿಗಮದ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.